International Journal of Kannada Research 2017; 3(1): 76-78




International Journal of Kannada Research
www.kannadajournal.com

ISSN: 2454–5813
IJSR 2017; 3(1): 76-78
© 2017 IJKS
www.kannadajournal.com
Received: 12-11-2016
Accepted: 13-12-2016

**ರಾಮರೆಡ್ಡಿ. ಕೆ**
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಕೆ. ಎಲ್. ಇ. ಸಂಸ್ಥೆಯ, ಎಸ್. ವಿ. ಎಸ್. ಬೆಳ್ಳುಬ್ಬಿ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಸವದತ್ತಿ, ಜಿಲ್ಲೆ ಬೆಳಗಾವಿ.

**Correspondence**
**ರಾಮರೆಡ್ಡಿ. ಕೆ**
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಕೆ. ಎಲ್. ಇ. ಸಂಸ್ಥೆಯ, ಎಸ್. ವಿ. ಎಸ್. ಬೆಳ್ಳುಬ್ಬಿ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಸವದತ್ತಿ, ಜಿಲ್ಲೆ ಬೆಳಗಾವಿ.

# ವಚನಕಾರರ ಮಾನವೀಯ ಚಿಂತನೆಗಳು

**ರಾಮರೆಡ್ಡಿ. ಕೆ**

ಆದಿಮ ಕಾಲದಲ್ಲಿ ಮಾನವ ಕಾಡಿನಲ್ಲಿ ವಾಸಿಸುತ್ತಿದ್ದಾಗ ಪ್ರಾಣಿ ಸಹಜವಾದ ವರ್ತನೆಗಳನ್ನು ಹೊಂದಿದ್ದನು. ಅನಾಗರೀಕನಾಗಿದ್ದ ಅವನು ಕಾಲಾನುಕ್ರಮದಲ್ಲಿ ಭೌತಿಕ ಮತ್ತು ಬೌದ್ಧಿಕ ವಿಕಾಸ ಹೊಂದಿ ನಾಗರೀಕನೆನಿಸಿ, ತನ್ನದೇ ಸಮಾಜವನ್ನು ನಿರ್ಮಿಸಿಕೊಂಡನು. ನಾಗರೀಕತೆಯನ್ನು ಕಂಡ ಸಮಾಜವು ಸುಧಾರಣೆಯ ಹಂತ ತಲುಪಿದ್ದೂ ಎಷ್ಟು ನಿಜವೋ! ಅಷ್ಟೇ ಪ್ರಮಾಣದಲ್ಲಿ ಬೌದ್ಧಿಕವಾಗಿ ಅನಾಗರೀಕ ವರ್ತನೆಯನ್ನು ಕೆಲವರು ಇನ್ನೂ ಉಳಿಸಿಕೊಂಡಿರುವುದು ಇಂದಿನ ಸಮಾಜದ ದುರಂತವೇ ಸರಿ. ಹಾಗಾದರೆ ನಾಗರೀಕ ಸಮಾಜದ ಪ್ರಮುಖ ಲಕ್ಷಣಗಳಾವುವು ಎಂಬ ಪ್ರಶ್ನೆ ಏಳತೊಡಗುತ್ತದೆ.

ನಾಗರೀಕ ಸಮಾಜದ ಲಕ್ಷಣಗಳೆಂದರೆ ನಿಸರ್ಗದಲ್ಲಿರುವ ಪಶು, ಪಕ್ಷಿ ಮತ್ತು ಇತರ ಜೀವ ಸಂಕುಲಗಳಿಗಿಂತ ಮಿಗಿಲಾದ ಸುಸ್ಥಿರ ಬದುಕನ್ನು ಕಟ್ಟಿಕೊಳ್ಳುವುದು. ಇತರ ಜೀವಿಗಳಿಗಿಂತ ಶ್ರೇಷ್ಠನಾಗಿ ಬದುಕುವುದು. ಮಾನವನಿಗಿರುವ ದೊಡ್ಡ ವರವೆಂದರೆ ಬುದ್ಧಿ ಮತ್ತು ಮಾತು. ಬುದ್ಧಿ ಮತ್ತು ಮಾತು ಸಿದ್ಧಿಸಿದ ಮೇಲೆ ಮನುಷ್ಯನ ಆಲೋಚನಾ ಕ್ರಮದಲ್ಲಿ ಮಾನವೀಯ ಎಳೆಗಳು ಕಾಣಿಸಲೇಬೇಕು. ಆ ಮಾನವೀಯತೆ ಭೂಮಿಯ ಮೇಲೆ ಹುಟ್ಟಿದ ಪ್ರತಿ ವ್ಯಕ್ತಿಯಲ್ಲಿ ಸಾಕಾರಗೊಳ್ಳಬೇಕಾಗಿತ್ತು. ಆದರೆ ಕೆಲವರಲ್ಲಿ ಹಾಗಾಗಲಿಲ್ಲ.

ಹಾಗಾದರೆ ಮಾನವೀಯತೆ ಎಂದರೇನು? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಮಾನವೀಯತೆ ಎಂದರೆ 'ಮನುಷ್ಯನಿಗೆ ಇರಬೇಕಾದ ಸಹಜ ಧರ್ಮ, ಮನುಷ್ಯತ್ವ'. ಈ ಮನುಷ್ಯತ್ವ ಸಕಲ ಜೀವಿಗಳ ಮೇಲೆ ಅಂತಃಕರುಣೆಯುಳ್ಳದ್ದಾಗಿರಬೇಕು. ಇದರಲ್ಲಿ ಯಾವುದೇ ತರತಮ ಭಾವನೆಯಾಗಲಿ ಇರಬಾರದು. ಸಾಹಿತ್ಯಿಕ ವಲಯದಲ್ಲಿ ಗಮನಿಸುವದಾದರೆ ಹಳಗನ್ನಡ ಕವಿಗಳು, ವಚನಕಾರರು, ದಾಸರು ಮತ್ತು ಆಧುನಿಕ ಕವಿಗಳು ಮಾನವೀಯ ಚಿಂತನೆಯ ಪ್ರತಿಪಾದನೆಯನ್ನು ತಮ್ಮ ಕೃತಿಗಳಲ್ಲಿ ಪ್ರತಿಪಾದಿಸಿದ್ದನ್ನು ಕಾಣಬಹುದು.

ಹನ್ನೆರಡನೆಯ ಶತಮಾನ ಕನ್ನಡ ನಾಡಿನಲ್ಲಿ ಪ್ರಮುಖವಾದ ಘಟ್ಟ. ಆಗ ಬಹಳಷ್ಟು ಜನ ಸಮುದಾಯಗಳು ಸಾಮಾಜಿಕ, ಧಾರ್ಮಿಕ, ಆರ್ಥಿಕ ತಲ್ಲಣಗಳನ್ನು ಅನುಭವಿಸುತ್ತಿದ್ದ ಕಾಲ. ಅಂದಿನ 'ಸಾರ್ವಜನಿಕ ಬದುಕು ಯಾವುದಾವುದೋ ಕಾರಣಕ್ಕೆ ಚಲನಶೀಲತೆಯನ್ನು ಕಳೆದುಕೊಂಡಿತ್ತು. ಸ್ಥಗಿತಕ್ಕೆ ಅಥವಾ ತಲ್ಲಣಕ್ಕೆ ಒಳಗಾದಾಗ, ಅಂಧಶ್ರದ್ಧೆ, ಅಸಂಗತಗಳ ಹುತ್ತವಾಗಿ, ಶೋಷಣೆ–ಅಸಮಾನತೆಗಳೇ 'ಧರ್ಮ' ಎನಿಸಿದ್ದವು. ಅಂತಹ ವ್ಯವಸ್ಥೆಯಿಂದ ಜನಸಮುದಾಯವನ್ನು ಮುಕ್ತಗೊಳಿಸಲು ಒಂದು ಪರಿಣಾಮಕಾರಿ ಪರ್ಯಾಯ ವ್ಯವಸ್ಥೆಯ ಹುಟ್ಟು ಅಗತ್ಯವಾಗಿತ್ತು. ಆ ಅಗತ್ಯವನ್ನು ಪೂರೈಸಿದ ಚಳವಳಿಯೇ ವಚನ ಚಳುವಳಿ.' ಈ ಚಳುವಳಿಯ ಮುಖ್ಯ ಗುರಿ ಸಮಾನತೆ, ಧಾರ್ಮಿಕ ನಿರಪೇಕ್ಷತೆ, ಆರ್ಥಿಕ ಬಲ ಮತ್ತು ಮಾನವೀಯ ನೆಲೆಗಟ್ಟಿನ ಮೇಲೆ ಕಟ್ಟುವದಾಗಿತ್ತು. ಈ ಎಲ್ಲ ಆಲೋಚನೆಗಳು ವೈಜ್ಞಾನಿಕ ಮನೋಭಾವದಿಂದ ಕೂಡಿದ್ದವು.

'ಯುಗ, ಯುಗಗಳಿಂದ ಬಂದ ಪದ್ಧತಿ–ಪರಂಪರೆಗಳೆಂದು ಅವೆಲ್ಲ ದೈವ ನಿಯಮಿತಿ ಎಂದು, ಸಂಪ್ರದಾಯಕ್ಕೆ ವಿಧೇಯವಾಗಿ ನಡೆಸಿಕೊಳ್ಳದಿದ್ದರೆ ಧರ್ಮದ್ರೋಹವಾಗುತ್ತದೆ, ನರಕ ಪ್ರಾಪ್ತಿಯಾಗುತ್ತದೆ ಎಂದೆಲ್ಲ ಹೆದರಿಸಿ, ತಾವು ಹೇಳಿದ್ದೇ ಧರ್ಮ ಎಂದು ಜನ ಒಪ್ಪಿಕೊಳ್ಳುವಂತೆ ಮಾಡಿದ್ದ ಪಟ್ಟಭದ್ರ ಹಿತಾಸಕ್ತಿಗಳು ಮುಚ್ಚಿಕೊಂಡಿದ್ದ ಬಾಗಿಲನ್ನು ತೆರೆದು ಸತ್ಯವನ್ನು ಬಯಲಿಗೆ ತಂದ ಒಂದು ಅಪೂರ್ವ ಪ್ರಯೋಗ ನಡೆಸಿದ, ಸನಾತನವೆಂಬುದನ್ನು ಅನಾಥಗೊಳಿಸಿದ ಕೀರ್ತಿ ವಚನ ಸಾಹಿತ್ಯಕ್ಕೆ ಸಲ್ಲುತ್ತದೆ.' ದೇವಾಲಯಗಳಲ್ಲಿ ಶೋಷಣೆ ವಿಪರೀತವಾಗಿತ್ತು. ಅಷ್ಟೊತ್ತಿಗಾಗಲೇ ಅಸ್ತಿತ್ವದಲ್ಲಿದ್ದ ಸ್ಥಾವರ ಲಿಂಗಕ್ಕೆ

ಬದಲಾಗಿ ಇಷ್ಟಲಿಂಗ ಧಾರಣೆ ಮಾಡುವುದರ ಮೂಲಕ ಹೊಸ ಕ್ರಾಂತಿಯನ್ನೇ ಹುಟ್ಟುಹಾಕಿದರು. ದೇವರ ದರ್ಶನ, ಸಾನಿಧ್ಯ ಅಸಾಧ್ಯವಾಗಿದ್ದ ಜನತೆಗೆ ದೇಹದ ಮೇಲೆ ಇಷ್ಟಲಿಂಗಧಾರಣೆ ಮಾಡಿಸುವದರ ಮೂಲಕ ಸರಳವಾಗಿ ದೇವರನ್ನು ದೊರಕಿಸಿಕೊಟ್ಟರು. ಆ ಮೂಲಕ ಶೋಷಣೆಗೆ ಖಾಯಮ್ಮಾದ ಪರಿಹಾರ ದೊರಕಿತು.

ಜಾತಿ ವರ್ಣಗಳನ್ನು ಶಿವಶರಣರು ಒಪ್ಪುವದಿಲ್ಲ. ಜನರಿಗಾಗುತ್ತಿದ್ದ ಅವಮಾನವನ್ನು ಕೊನೆಗಾಣಿಸಲು ವಚನಕಾರರು ಯೋಚಿಸಿದರು. ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ ಕಷ್ಟತನವ ಹೊರಿಸದಿರಯ್ಯಾ ಎಂದು ಹೇಳುತ್ತಾ ಬಸವಣ್ಣನವರು

'ಚನ್ನಯ್ಯನ ಮನೆಯ ದಾಸಮ ಮಗನು
ಕಕ್ಕಯ್ಯನ ಮನೆಯ ದಾಸಿಯ ಮಗಳು
ಇವರಿಬ್ಬರೂ ಹೊಲದಲು ಬೆರಣಿಗೆ ಹೋಗಿ ಸಂಗವ ಮಾಡಿದರು
ಇವರಿಬ್ಬರಿಗೆ ಹುಟ್ಟಿದ ಮಗ ನಾನು
ಕೂಡಲಸಂಗಮ ದೇವ ಸಾಕ್ಷಿಯಾಗಿ

ಎಂದು ಹೇಳುವ ಮೂಲಕ ಬಸವಣ್ಣ ತನ್ನನ್ನು ಕೆಳವರ್ಗದ ಶರಣರ ಜಾತಿಗೆ ಸಮೀಕರಿಸಿಕೊಳ್ಳುತ್ತ, ಅನೈತಿಕ ಸಂಬಂಧಕ್ಕೆ ಹುಟ್ಟಿದವನೆಂದು ಆರೋಪಿಸಿಕೊಳ್ಳುತ್ತಾನೆ. ಆ ಮೂಲಕ ಜಾತಿ ಮತ್ತು ಹುಟ್ಟಿನ ಭ್ರಮೆಯನ್ನು ಕಿತ್ತು ಹಾಕುವ ಮೂಲಕ ನಾವೆಲ್ಲರೂ ಎಂಬ ಭಾವನೆಯನ್ನು ಪ್ರತಿಪಾದಿಸುತ್ತಾನೆ. ಶೋಷಿತ ವರ್ಗದ ಜನರನ್ನೆಲ್ಲಾ ಅನುಭವ ಮಂಟಪದೊಳಗೆ ಸೇರಿಸಿಕೊಂಡದ್ದು ಶರಣ ಸಂವಿಧಾನದೊಳಗೆ ಸೇರಿಸಿಕೊಂಡದ್ದು ಮಹತ್ವದ ಸಾಧನೆಯಾಗಿದೆ.

ಸ್ವರ್ಗ ನರಕಗಳನ್ನು ನಂಬಿಸಿ ಜನರನ್ನು ಸುಲಿಗೆ ಮಾಡುತ್ತಿರುವದನ್ನು ಕಂಡ ಆಯ್ದಕ್ಕಿ ಮಾರಯ್ಯ

'ಭಕ್ತರಿಗೆ ಬಡತನವುಂಟೆ ಸತ್ಯರಿಗೆ ಕರ್ಮವುಂಟೆ
ಚಿತ್ತಮುಟ್ಟಿ ಸೇವೆಯ ಮಾಡುವ ಭಕ್ತಂಗೆ
ಮರ್ತ್ಯ ಕೈಲಾಸವೆಂಬುದುಂಟೇ ಆತನಿದ್ದುದೇ ಸುಕ್ಷೇತ್ರ
ಆತನಂಗವೆ ಅಮಲೇಶ್ವರ ಲಿಂಗದ ಸಂಗಸುಖ

ಎಂದು ಸಿಡಿದೇಳುವ ಮೂಲಕ ಸತ್ಯಸುಖವುಳ್ಳ ಬದುಕನ್ನು ಕಟ್ಟಿಕೊಂಡವನಿಗೆ ಅವನಿರುವ ಪ್ರದೇಶವೇ ಶ್ರೇಷ್ಠ, ಅಲ್ಲಿಯೇ ಅವನಿಗೆ ಅವನ ದೇವರ' ಸಾಕ್ಷಾತ್ಕಾರವಾಗಬಲ್ಲದೆನ್ನುತ್ತಾನೆ.

**'ಯತ್ರ ನಾರ್ಯಸ್ತು ಪೂಜ್ಯತೆ ತತ್ರ ದೇವತಃ'** ಎಂದು ಹೇಳಿ, ನಂತರದಲ್ಲಿ 'ನಸ್ತ್ರೀ ಸ್ವಾತಂತ್ರ್ಯಮರ್ಹತಿ' ಎಂದು, ಹೆಣ್ಣು ಮಾಯೆ ಎಂದು ಭಾವಿಸಿ ಮಹಿಳೆಯ ಸ್ವಾತಂತ್ರ್ಯವನ್ನು ಕಸಿದುಕೊಳ್ಳಲಾಯಿತು. ಸ್ತ್ರೀ ಕೀಳು, ಪುರುಷ ಮೇಲು ಎಂಬ ತರತಮ ಭಾವನೆಯನ್ನು ಪೋಷಿಸಿಕೊಂಡು ಬರಲಾಯಿತು. ಈ ಬಗೆಯ ನಿಲುವಿಗೆ ಜೇಡರ ದಾಸಿಮಯ್ಯ 'ನಿಡಿದೊಂದು ಕೋಲನ್ನು ಕಡಿದು ಎರಡು ಮಾಡಿ, ಅಡಿಯ ಹೆಣ್ಣು ಮಾಡಿ ಒಡತನದ ಗಂಡು ಮಾಡಿ, ನಡುವೆ ಹೊಸೆದಡೆ ಹುಟ್ಟಿದ ಕಿಚ್ಚು ಹೆಣ್ಣೊ ಗಂಡೊ ರಾಮನಾಥ। ಎಂದು ಪ್ರಶ್ನಿಸಿ ಗಂಡು ಹೆಣ್ಣನ್ನು ಪ್ರತ್ಯೇಕವಾಗಿ ನೋಡಲಾಗದೆನ್ನುತ್ತಾನೆ. ದೈಹಿಕ ಹೊರಗಣ ರೂಪದಲ್ಲಿ ವ್ಯತ್ಯಾಸ ಮಾತ್ರ ಕಾಣಬಲ್ಲೆವೆಂದು, 'ಮೊಲೆಮುಡಿ ಬಂದರೆ ಹೆಣ್ಣೆಂಬರು, ಗಡ್ಡಮೀಸೆ ಬಂದರೆ ಗಂಡೆಂಬರು, ನಡುವೆ ಸುಳಿವ ಆತ್ಮ ಹೆಣ್ಣೂ ಅಲ್ಲ, ಗಂಡೂ ಅಲ್ಲ ಕಾಣಾ ರಾಮನಾಥ'। ಎಂದು ಹೇಳುತ್ತಾ ಹೆಣ್ಣಿನ ಬಗ್ಗೆ ಇರುವ ತರತಮ ಭಾವನೆಯನ್ನು ಅಲ್ಲಗಳೆಯುತ್ತಾನೆ. ಪುರುಷನಷ್ಟೇ ಸಮಾನವಾದ ಅವಕಾಶ ನೀಡಬೇಕೆಂದು ಪ್ರತಿಪಾದಿಸುತ್ತಾನೆ.

ಹನ್ನೆರಡನೆಯ ಶತಮಾನದಲ್ಲಿ ಅರಸೊತ್ತಿಗೆಯ ಮತ್ತು ಶ್ರೀಮಂತಿಕೆಯಲ್ಲಿರುವವರಿಂದ ಸಾಮಾನ್ಯರಿಗಾಗುವ ಶೋಷಣೆಯ ವಿರುದ್ಧ ಶರಣರು ಸಂಘರ್ಷಕ್ಕೆ ನಿಲ್ಲುತ್ತಾರೆ. 'ತನುಮನದಲ್ಲಿ ವಂಚನೆಯುಳ್ಳ ಪ್ರಪಂಚಿಯ ಮನೆಯ ಕೂಳಾ ಶುನಕನ ಎಂಜಲು' ಎಂದು ದೇವರ ದಾಸಿಮಯ್ಯ ಶ್ರೀಮಂತನ ಮನೆಯ ಅನ್ನ ಶ್ರೇಷ್ಠವೆನ್ನುವುದಿಲ್ಲ. ಆಳು ಮತ್ತು ಒಡೆಯ ಎಂದು ತಾರತಮ್ಯ ಮಾಡುವವರನ್ನು 'ನಾನೊಡೆಯ ಇವನ'ಡಿಗನೆಂದು ಪಡಿಪಚ್ಚವ ಮಾಡುವನ್ನಕ್ಕ ಅದು ತುಡುಗುಣಿಯ ಸವಿತ' ಎಂಬ ಮಾತಿನಲ್ಲಿ ಮೋಳಿಗೆ ಮಾರಯ್ಯ ಸಮಾನತೆಯ ಆಶಯವನ್ನು ಪ್ರತಿಪಾದಿಸುತ್ತಾನೆ. ವಚನಕಾರರು ಬಡವರ ಪರವಾಗಿ ನಿಂತಿದ್ದರಿಂದಲೇ ಕುಶಲಕರ್ಮಿಗಳು, ಕಾಯಕಜೀವಿಗಳೆಲ್ಲರೂ ಬಡವರೇ ಆಗಿದ್ದರು. 'ಮನೆ ನೋಡಾ ಬಡವರು, ಮನ ನೋಡಾ ಘನಮನ ಸಂಪನ್ನರು' ಎಂದು ಹೇಳುವ ಮೂಲಕ ಬಸವಣ್ಣನವರು ಶ್ರಮಜೀವಿಗಳನ್ನು ಮಾನವೀಯತೆಯ ನೆಲೆಯಿಂದ ಗೌರವಿಸುತ್ತಾನೆ. ಇದಕ್ಕೆ ಪೂರಕವೆಂಬಂತೆ 'ಅಂಗಕ್ಕೆ ಬಡತನವಲ್ಲದೆ ಮನಕ್ಕೆ ಬಡತನವುಂಟೇ' ಎಂದು ಆಯ್ದಕ್ಕಿ ಲಕ್ಕಮ್ಮ ಶ್ರಮಜೀವಿಗಳ ಮನದಲ್ಲಿ ಆತ್ಮ ವಿಶ್ವಾಸದ ಬೆಳಕನ್ನು ಹಚ್ಚುತ್ತಾಳೆ.

ಮಾನವನು ಸ್ವಾರ್ಥಿಯಾಗಿ ತನ್ನ ಇಷ್ಟಾರ್ಥಗಳನ್ನು ಈಡೇರಿಸಿಕೊಳ್ಳಲು ದೇವರಿಗೆ, ಸಂಪತ್ತಿಗೆ ಪ್ರಾಣಿ, ಪಕ್ಷಿ ಮತ್ತು ನರಬಲಿಯನ್ನು ಕೊಡುವ ಪರಂಪರೆಯನ್ನು ಪೋಷಿಸಿಕೊಂಡು ಬಂದಿದ್ದಾನೆ. ನಾವೆಲ್ಲ ವೈಜ್ಞಾನಿಕವಾಗಿ ಮುಂದುವರೆದವರೆಂದು ಹೇಳುವ ಇಂದಿನ ದಿನಗಳಲ್ಲೂ ಬೆಳಗಾವಿ ಜಿಲ್ಲೆಯ ಒಂದು ಹಳ್ಳಿಯಲ್ಲಿ ನಿಧಿಗಾಗಿ ಎಳೆಯ ಮಕ್ಕಳನ್ನೇ ಬಲಿ ಕೊಟ್ಟ ಸುದ್ದಿಯನ್ನು ಓದಿದ್ದೇವೆ. ಇದು ಅಮಾನವೀಯ ಕೃತ್ಯವಲ್ಲದೇ ಮತ್ತೇನೂ ಅಲ್ಲ. ಇದನ್ನರಿತ ಅಂದಿನ ಶರಣರು ಹೇಳಿದ್ದು

'ದಯವಿಲ್ಲದ ಧರ್ಮ ಏವುದಯ್ಯ
ದಯವಿರಬೇಕು ಸಕಲ ಪ್ರಾಣಿಗಳಲಿ
ದಯವೇ ಧರ್ಮದ ಮೂಲವಯ್ಯಾ
ಕೂಡಲ ಸಂಗಯ್ಯನಂತಲ್ಲದೊಲ್ಲನಯ್ಯಾ॥

ಎಂದು ಬಸವಣ್ಣನವರು ಧರ್ಮಕ್ಕೆ ದಯವೇ ಮೂಲ ಮಂತ್ರವಾದಾಗ ಮಾತ್ರ ಆ ಧರ್ಮ ಶ್ರೇಷ್ಠವಾಗಲು ಸಾಧ್ಯವೆಂದು ನುಡಿಯುತ್ತಾರೆ. ಆದರೆ ಇಂದು ಭಯವೇ ಧರ್ಮದ ಮೂಲವೆಂದಾಗಿ ಮಾನವೀಯತೆಯೇ ಮಾಯವಾಗಿರುವ ಈ ಸಂದರ್ಭದಲ್ಲಿ ಶರಣರ ವಚನಗಳು ನಮಗೆ ಸರಿಯಾದ ದಾರಿಯನ್ನು ತೋರಿಸಬಲ್ಲವು.

ಹನ್ನೆರಡನೆಯ ಶತಮಾನದ ಶರಣರು ಯಾವ ವಿಚಾರಗಳನ್ನು ನುಡಿಯುತ್ತಿದ್ದರೋ, ಅದರಂತೆ ನಡೆಯುತ್ತಿದ್ದರು. ಅದಕ್ಕಾಗಿಯೇ 'ನುಡಿದಂತೆ ನಡೆ' ಎಂಬ ಸಿದ್ಧಾಂತವನ್ನು ಅಪ್ಪಿಕೊಂಡಿದ್ದರು. 'ನುಡಿದರೇನಯ್ಯ ನಡೆ ಇಲ್ಲದನ್ನಕ್ಕ, ನಡೆದರೇನಯ್ಯ ನುಡಿ ಇಲ್ಲದನ್ನಕ್ಕ, ಈ ನಡೆನುಡಿಯರಿದು ಏಕವಾಗಿ, ತಾವು ಮೃಡಸ್ವರೂಪರಾದ ಶರಣರಡಿಗೆರಗಿ ನಾನು ಬದುಕಿದೆನಯ್ಯಾ ಬಸವಪ್ರಿಯ ಕೂಡಲಚನ್ನಬಸವಣ್ಣ॥' ಎಂದು ಹಡಪದ ಅಪ್ಪಣ್ಣ ನುಡಿಯುತ್ತಾನೆ. ಹೀಗೆ ವಚನಕಾರರ ವಿಚಾರಗಳು ಮಾನವೀಯ ಮೌಲ್ಯಗಳನ್ನೊಳಗೊಂಡ ಸಮಾನತೆಯ ಸಮಾಜವನ್ನು ಕಟ್ಟುವ

ಪ್ರಯತ್ನ ಮಾಡಿವೆ. ಇಂತಹ ವಿಚಾರಗಳು ಇಂದು ನಿತ್ಯವೂ ನಮ್ಮ ಬದುಕಿನಲ್ಲಿ ಅಳವಡಿಸಿಕೊಂಡಲ್ಲಿ ಸುಂದರ, ಸದೃಢ ಸಮಾಜವನ್ನು ಸಾಕಾರಗೊಳಿಸಬಹುದಾಗಿದೆ. ಅಂತಹ ನಿರೀಕ್ಷೆಯೊಂದಿಗೆ ಈ ನನ್ನ ಪ್ರಬಂಧವನ್ನು ಮುಗಿಸುತ್ತೇನೆ. ನಮಸ್ಕಾರ.

**ಆಕರ ಗ್ರಂಥಗಳು**


1. ಸಮಗ್ರ ವಚನ ಸಂಪುಟಗಳು – ಡಾ.ಎಂ.ಎಂ. ಕಲಬುರ್ಗಿ, ಪ್ರ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು
2. ವಚನ ಸಂಸ್ಕೃತಿಯ ಸಾಮಾಜಿಕ ಆಯಾಮಗಳು – ಡಾ.ಟಿ.ಆರ್.ಚಂದ್ರಶೇಖರ, ಪ್ರ. ಸಿವಿಜಿ ಪಬ್ಲಿಕೇಶನ್ಸ್, ಬೆಂಗಳೂರು
3. ಪರ್ಯಾಯ ಸಂಸ್ಕೃತಿ ವಚನ ಸಂಪುಟ: ಸಂ. ಡಾ.ಸಿ.ವೀರಣ್ಣ, ಅ.ಭಾ.ಶ.ಸಾ.ಪರಿಷತ್ತು. ಮೈಸೂರು.
4. ಕನ್ನಡ ಸಾಹಿತ್ಯ ಚರಿತ್ರೆ– ರಂ.ಶ್ರೀ.ಮುಗಳಿ. ಪ್ರ: ಗೀತಾ ಬುಕ್ ಹೌಸ್, ಮೈಸೂರು.